# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :433

ಸದಸ್ಯರ ಹೆಸರು : ಶ್ರೀ ತಿಪ್ಪಣ್ಣಪ್ಪ ಕಮಕನೂರು

ಉತ್ತರಿಸುವ ಸಚಿವರು :ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 13.08.2025

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ರಾಜ್ಯದ ಹೆಮ್ಮೆಯ ಶಕ್ತಿ ಯೋಜನೆಯು ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲೊಂದಾಗಿದ್ದು, ಕಲ್ಯಾಣ-ಕರ್ನಾಟಕ ಭಾಗದಲ್ಲಿ ಎಷ್ಟು ಜನ ಈ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ;</td><td>ರಾಜ್ಯದಲ್ಲಿ ಶಕ್ತಿ ಯೋಜನೆ ಜಾರಿಯಾದ ನಂತರದಲ್ಲಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ ಕಲ್ಯಾಣ-ಕರ್ನಾಟಕ ಭಾಗದ 07 ಜಿಲ್ಲೆಗಳಾದ ಕಲಬುರಗಿ, ಬೀದರ್, ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ ಮತ್ತು ವಿಜಯನಗರಗಳಲ್ಲಿ ಜೂನ್ - 2025ರವರೆಗೆ ಒಟ್ಟು 5726.74 ಲಕ್ಷದಷ್ಟು ಮಹಿಳಾ ಪ್ರಯಾಣಿಕರು ಈ ಯೋಜನೆಯ ಪ್ರಯೋಜನ ಪಡೆದುಕೊಂಡಿದ್ದಾರೆ.</td></tr>
<tr><td>ಆ.<br><br><br>ಇ.</td><td>ಶಕ್ತಿ ಯೋಜನೆ ಆರಂಭವಾದ ತರುವಾಯ ಪ್ರಯಾಣಿಕರ ಅನುಕೂಲಕ್ಕಾಗಿ ಎಷ್ಟು ಹೊಸ ಬಸ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ;<br>ಪುರುಷ ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಸರ್ಕಾರವು ಹೊಸ ಬಸ್‌ಗಳನ್ನು ಸೇರ್ಪಡೆಗೊಳಿಸಲು ಕ್ರಮ ಕೈಗೊಳ್ಳುವುದೇ?</td><td>ರಾಜ್ಯದಲ್ಲಿ "ಶಕ್ತಿ ಯೋಜನೆ" ಜಾರಿಗೆ ಬಂದ ನಂತರ ಪ್ರಯಾಣಿಕರ ಸಂಖ್ಯೆ ಹೆಚ್ಚಾದ ಹಿನ್ನೆಲೆಯಲ್ಲಿ, ಪ್ರಯಾಣಿಕರ ಅನುಕೂಲಕ್ಕಾಗಿ ಈ ಕೆಳಕಂಡಂತೆ ನಾಲ್ಕು ಸಾರಿಗೆ ಸಂಸ್ಥೆ / ನಿಗಮಗಳಿಗೆ ಹೊಸದಾಗಿ ಬಸ್ಸುಗಳನ್ನು ಸೇರ್ಪಡೆಗೊಳಿಸಲಾಗಿದೆ:-
<table>
<tr><th>ನಿಗಮ/ಸಂಸ್ಥೆ</th><th colspan="2">ಬಸ್ಸುಗಳ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td colspan="2">1148</td></tr>
<tr><td rowspan="2">ಬೆಂ.ಮ.ಸಾ.ಸಂಸ್ಥೆ</td><td>820</td><td>ಡೀಸೆಲ್ ಬಸ್‌ಗಳು</td></tr>
<tr><td>1399</td><td>ವಿದ್ಯುತ್ ಚಾಲಿತ ಬಸ್‌ಗಳನ್ನು ಜಿ.ಸಿ.ಸಿ. ಮಾದರಿಯಲ್ಲಿ</td></tr>
<tr><td>ವಾ.ಕ.ರ.ಸಾ.ಸಂಸ್ಥೆ</td><td colspan="2">856</td></tr>
<tr><td>ಕ.ಕ.ರ.ಸಾ.ನಿಗಮ</td><td colspan="2">1031</td></tr>
<tr><td>ಒಟ್ಟು</td><td colspan="2">5254</td></tr>
</table>
ಪ್ರಸ್ತುತ, ಕಲ್ಪಿಸುತ್ತಿರುವ ಸಾರಿಗೆಗಳು ಗ್ರಾಮೀಣ ಭಾಗದ ಶಾಲಾ / ಕಾಲೇಜು ವಿದ್ಯಾರ್ಥಿಗಳ ಹಾಗೂ ಸಾರ್ವಜನಿಕರ ಬೇಡಿಕೆಗೆ ಅನುಗುಣವಾಗಿ ಇರುತ್ತವೆ. ಆದಾಗ್ಯೂ, ಹೆಚ್ಚುವರಿ ಬೇಡಿಕೆ ಬಂದಲ್ಲಿ, ಬೇಡಿಕೆಗೆ ಅನುಗುಣವಾಗಿ ಮೂಲಭೂತ ಸೌಕರ್ಯಗಳನ್ನು ಕ್ರೂಢೀಕರಿಸಿಕೊಂಡು ಮಾರ್ಗಸಮೀಕ್ಷೆ ಕೈಗೊಂಡು ಪರಿಶೀಲಿಸಿ ಸಾರಿಗೆ ಸೌಲಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ನಾಲ್ಕು ಸಾರಿಗೆ ಸಂಸ್ಥೆಗಳಾದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಪುರುಷರನ್ನೊಳಗೊಂಡಂತೆ ಎಲ್ಲಾ ವರ್ಗದ</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಪ್ರಯಾಣಿಕರಿಗಾಗಿ ಬೇಡಿಕೆಗೆ ಅನುಗುಣವಾಗಿ, ಹೆಚ್ಚಿನ ಅನುಸೂಚಿ/ ಸರತಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ.<br><br>ಪ್ರತಿ ಆರ್ಥಿಕ ವರ್ಷದಲ್ಲಿ ಹೊಸ ಅನುಸೂಚಿಗಳಿಗೆ ಹಾಗೂ ನಿರುಪಯುಕ್ತಗೊಳಿಸುವ ವಾಹನಗಳ ಬದಲಿಗೆ ಹೊಸ ವಾಹನಗಳನ್ನು ಸೇರ್ಪಡೆಗೊಳಿಸುವ ನಿಯಮ ಪಾಲಿಸಲಾಗುತ್ತಿದೆ.<br>ಸಾರಿಗೆ ನಿಗಮಗಳಿಗೆ 2025-26ನೇ ಸಾಲಿನ ಆಯವ್ಯಯದಲ್ಲಿ 2000 ಡೀಸಲ್ ಬಸ್‌ಗಳನ್ನು ಖರೀದಿಸುವ ಘೋಷಣೆ ಮಾಡಲಾಗಿದ್ದು, ನಿಗಮವಾರು ಈ ಕೆಳಕಂಡಂತೆ ಬಸ್ಸುಗಳನ್ನು ಹಂಚಿಕೆ ಮಾಡಲಾಗಿದೆ.<br><br>**ನಿಗಮ/ಸಂಸ್ಥೆ** — **ಬಸ್ಸುಗಳ ಸಂಖ್ಯೆ**<br>ಕ.ರಾ.ರ.ಸಾ.ನಿಗಮ — 900<br>ವಾ.ಕ.ರ.ಸಾ.ಸಂಸ್ಥೆ — 700<br>ಕ.ಕ.ರ.ಸಾ.ನಿಗಮ — 400<br>**ಒಟ್ಟು** — **2000**<br><br>**ಕ.ರಾ.ರ.ಸಾ.ನಿಗಮಕ್ಕೆ** 900 ಬಸ್ಸುಗಳನ್ನು ಖರೀದಿಸಲು ಅವಶ್ಯವಿರುವ ಅನುದಾನವನ್ನು ಒದಗಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.<br><br>**ವಾ.ಕ.ರ.ಸಾ.ಸಂಸ್ಥೆಯ** ಒಟ್ಟು 700 ಬಸ್‌ಗಳಲ್ಲಿ ಈಗಾಗಲೇ 300 ಬಸ್ಸುಗಳ ಖರೀದಿಗೆ ಅನುದಾನ ಒದಗಿಸಲಾಗಿದೆ. ಅದರಂತೆ ಟೆಂಡರ್ ಆಹ್ವಾನಿಸಲಾಗಿದ್ದು, ಸದರಿ ಬಸ್‌ಗಳನ್ನು ಖರೀದಿ ಮಾಡಲು ಕ್ರಮವಹಿಸಲಾಗುತ್ತಿದೆ. ಉಳಿದಂತೆ 400 ಬಸ್ಸುಗಳಿಗೆ ಅವಶ್ಯವಿರುವ ಅನುದಾನವನ್ನು ಒದಗಿಸುವ ಪ್ರಸ್ತಾವನೆಯು ಸಹ ಪರಿಶೀಲನೆಯಲ್ಲಿದೆ.<br><br>**ಕ.ಕ.ರಾ.ಸಾ.ನಿಗಮಕ್ಕೆ** ಪ್ರಸ್ತಾಪಿತ 400 ಬಸ್‌ಗಳ ಖರೀದಿಗೆ KKRDB, DULT ಗಳಿಂದ ಸಂಸ್ಥೆಗೆ ನಿಗಧಿಪಡಿಸಲಾಗಿರುವ ಅನುದಾನವನ್ನು ಹೊರತುಪಡಿಸಿ ಉಳಿಕೆ ಮೊತ್ತಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚಿಸಲಾಗಿದೆ ಹಾಗೂ KKRDBಯಿಂದ ಅನುದಾನ ಒದಗಿಸುವಂತೆ ಯೋಜನೆ ಮತ್ತು ಸಾಂಖ್ಯಿಕ ಇಲಾಖೆಯನ್ನು ಕೋರಲಾಗಿದ್ದು, ಸದರಿ ಇಲಾಖೆಯು ಪ್ರಸ್ತಾವನೆ ಕುರಿತು ಅಭಿಪ್ರಾಯ ನೀಡುವಂತೆ KKRDB ಯನ್ನು ಕೋರಿದ್ದು, ನಿರೀಕ್ಷಿಸಲಾಗಿದೆ.<br><br>ಮೇಲ್ಕಂಡಂತೆ ಬಸ್‌ಗಳನ್ನು ಆಯಾ ನಿಗಮಗಳಿಗೆ ಪಡೆದ ನಂತರ ಆದ್ಯತೆಯ ಮೇರೆಗೆ ಬಸ್ಸುಗಳನ್ನು ಒದಗಿಸಲು ಕ್ರಮವಹಿಸಲಾಗುವುದು. |

ಸಂಖ್ಯೆ: ಟಿಡಿ 144 ಟಿಸಿಕ್ಯೂ 2025

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು